# *4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು*

**ಎಸ್‌ಸಿ. 45/2021**

| | | | |
|---|---|---|---|
| **ಸಾಕ್ಷಿದಾರರ ಹೆಸರು** | ಃ ಶ್ರೀ ಹೆಚ್.ಎಸ್.ರವಿ ಕುಮಾರ್ | *ಪ್ರಮಾಣ ಮಾಡಿಸಿದ ದಿನಾಂಕಃ* | |
| **ತಂದೆ/ಗಂಡನ ಹೆಸರು** | ಃ ಶ್ರೀ ಶಿವಣ್ಣಾರಾಧ್ಯ | **23.11.2023** | |
| **ವಯಸ್ಸು** | ಃ **46 ವರ್ಷ** | | |
| **ವೃತ್ತಿ** | ಃ ಪುರೋಹಿತರು | **ಪ್ರಾ.ಸಾ.** | ಃ **13** |
| **ವಾಸಸ್ಥಳ** | ಃ ಮೈಸೂರು | **ಚಾ.ಸಾ.** | ಃ **18** |

**ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ**

. ನಾನು ಪೌರೋಹಿತ್ಯ ಮತ್ತು ಜ್ಯೋತಿಷ್ಯ ವೃತ್ತಿಯನ್ನು ಮಾಡುತ್ತಿದ್ದೇನೆ. ನನ್ನ ಕಛೇರಿ ನೀಲಕಂಠಸ್ವಾಮಿ ಮಠದಲ್ಲಿ ಇರುವ ಒಂದು ರೂಮ್ ನಲ್ಲಿ ಇದೆ. ನನಗೆ ಮೃತ ಪರಶಿವಮೂರ್ತಿಯವರ ಪರಿಚಯ ಇತ್ತು. ಅವರು ವಿಶ್ವಚೇತನ ವಿದ್ಯಾಸಂಸ್ಥೆಯನ್ನು ನಡೆಸುತ್ತಿದ್ದರು ಆ ಸಂಸ್ಥೆಯನ್ನು ಸಂಪೂರ್ಣ ಅವರೇ ನೋಡಿಕೊಳ್ಳುತ್ತಿದ್ದರು. *8-10* ವರ್ಷಗಳ ಹಿಂದೆ ಮೃತ ಪರಶಿವಮೂರ್ತಿಯವರು ನನ್ನನ್ನು ನೀವು ಸಹ ಸಂಸ್ಥೆಯ ಮೆಂಬರ್ ಆಗಿ ಎಂದು ಕೇಳಿಕೊಂಡಿದ್ದರು. ಆಗ ನಾನು ನನಗೆ ಪೌರೋಹಿತ್ಯ ಮತ್ತು ಜ್ಯೋತಿಷ್ಯ ವೃತ್ತಿ ಇರುವ ಕಾರಣ ಬೇರೆ ಕೆಲಸ ಮಾಡಲು ಆಗುವುದಿಲ್ಲ ಎಂದು ಹೇಳಿದಾಗ ಅವರು ನೆಪ ಮಾತ್ರಕ್ಕೆ ಸದಸ್ಯರಾಗಿರುವಂತೆ ಹೇಳಿದ್ದರು. ಆಗ ನಾನು ಒಪ್ಪಿಕೊಂಡು *10* ವರ್ಷಗಳ ಹಿಂದೆ ಆ ಸಂಸ್ಥೆಯ ಸದಸ್ಯನಾಗಿದ್ದೆ. ಮೃತ ಪರಶಿವಮೂರ್ತಿಯವರೇ ಸಂಸ್ಥೆಯ ಎಲ್ಲಾ ಆಗು ಹೋಗುಗಳನ್ನು ನೋಡಿಕೊಳ್ಳುತಿದ್ದರು. ಆ ಸಂಸ್ಥೆಯ ಎನ್.ಆರ್.ಮೊಹಲ್ಲಾದಲ್ಲಿ ನಡೆಯುತ್ತಿದ್ದ ಸಂಸ್ಕೃತ ಪಾಠಶಾಲೆಯನ್ನು ವಿಶ್ವನಾಥ ಭಟ್

ಮತ್ತು ಪರಶಿವ ಇವರೇ ಅಂದರೆ ಈ ಪ್ರಕರಣದ 4 ಮತ್ತು 5ನೇ ಆರೋಪಿತರೇ ನೋಡಿಕೊಳ್ಳುತ್ತಿದ್ದರು. ಅವರಿಬ್ಬರು ಆ ಶಾಲೆಯಲ್ಲಿ ಶಿಕ್ಷಕರಾಗಿ ಕೆಲಸ ಮಾಡುತ್ತಿದ್ದರು.

2. ನೀಲಕಂಠ ಸ್ವಾಮಿಯ ಮಠದ ಕಟ್ಟಡದಲ್ಲಿಯೇ ಶಾಲೆಯ ಶಿಕ್ಷಕರ ಮೀಟಿಂಗ್ ಗಳನ್ನು ನಡೆಸುತ್ತಿದ್ದರು ಆದರೆ ನಾನು ಆ ಮೀಟಿಂಗ್ ಗಳಿಗೇ ಹೋಗುತ್ತಿರಲಿಲ್ಲ. ಆ ಮೀಟಿಂಗ್ ಗಳಲ್ಲಿ ಏನು ನಡೆಯುತ್ತಿತ್ತು ಎಂದು ನನಗೆ ಗೊತ್ತಿಲ್ಲ. ಪರಶಿವಮೂರ್ತಿಯವರ ಕೊಲೆಯಾಗಿದೆ ಆದರೆ ಯಾರು ಅವರ ಕೊಲೆ ಮಾಡಿದ್ದಾರೆ ಎಂದು ನನಗೆ ಗೊತ್ತಾಗಿಲ್ಲ. ತನಿಖಾಧಿಕಾರಿ ಮುಂದೆ ನಾನು ಹೇಳಿಕೆ ಕೊಟ್ಟಿದ್ದೇನೆ. ಈಗ ನಾನು ನೋಡುತ್ತಿರುವ ದಾಖಲೆ ವಿಶ್ವಚೇತನ ವಿದ್ಯಾಸಂಸ್ಥೆಯ ಆಡಳಿತ ಮಂಡಳಿಯ ಸದಸ್ಯರ ಪಟ್ಟಿ ಇರುತ್ತದೆ. ಸದರಿ ದಾಖಲೆಯನ್ನು ನಿ.ಪಿ-60 ಎಂದು ಗುರುತಿಸಿದೆ.

***ಈ ಹಂತದಲ್ಲಿ, ಈ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.***

***ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ-***

3. ಶಿಕ್ಷಕರ ಮೀಟಿಂಗ್ ಗಳಲ್ಲಿ ಪರಶಿವಮೂರ್ತಿಯವರು ಎಲ್ಲಾ ಶಿಕ್ಷಕರನ್ನು ಬಾಯಿಗೆ ಬಂದಂತೆ ಬೈಯುತ್ತಿದ್ದರು, ಶಿಕ್ಷಕರುಗಳಿಗೆ ಗೌರವ ಕೊಡುತ್ತಿರಲಿಲ್ಲ ಮತ್ತು ಎಲ್ಲಾ ಶಿಕ್ಷಕರಿಂದ ಪರಶಿವಮೂರ್ತಿ ಹಣ ವಸೂಲಿ ಮಾಡುತ್ತಿದ್ದರು ಎಂದು ಎಲ್ಲಾ ಶಿಕ್ಷಕರು ನನಗೆ ಹೇಳುತ್ತಿದ್ದರು ಎಂದರೆ ಶಿಕ್ಷಕರು ಹೇಳುತ್ತಿರಲಿಲ್ಲ ಆದರೆ ಜನ ಮಾತಾನಾಡುತ್ತಿದ್ದರಿಂದ ಆ ಬಗ್ಗೆ ಗೊತ್ತಾಗಿತ್ತು. ವಿಶ್ವಚೇತನ ಸಂಸ್ಕೃತ ಪಾಠಶಾಲೆಯ ಶಿಕ್ಷಕರಾದ ವಿಶ್ವನಾಥ ಕೆ, ಪರಶಿವ.ಪಿ ಮತ್ತು ಇತರರು

ಸೇರಿಕೊಂಡು ಪರಶಿವಮೂರ್ತಿಯವರನ್ನು ಕೊಲೆ ಮಾಡಿರುತ್ತಾರೆ ಎಂದು ನನಗೆ ಕೇಳಿ ಗೊತ್ತಾಗಿದೆ ಎಂದರೆ ನಿಜ. ಪರಶಿವಮೂರ್ತಿಯವರು ನನ್ನನ್ನು ನೆಪ ಮಾತ್ರಕ್ಕೆ ಆಡಳಿತ ಮಂಡಳಿಯ ಸದಸ್ಯನಾಗಿ ಸೇರಿಸಿಕೊಂಡು ನನಗೆ ಯಾವುದೇ ವಿಷಯಗಳನ್ನು ತಿಳಿಸದೇ ನನ್ನ ಸಹಿಯನ್ನು ಮಾತ್ರ ಪಡೆಯುತ್ತಿದ್ದರು ಎಂದರೆ ನಿಜ. ಪರಶಿವಮೂರ್ತಿಯು --------- ಹೇಳುತ್ತಿದ್ದರು ಎಂದು ಹೇಳಿಕೆ ಕೊಟ್ಟಿದ್ದೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿ.ಪಿ-*61* ಎಂದು ಗುರುತಿಸಿದೆ.

<u>ಪಾಟೀ ಸವಾಲು : 5 ನೇ ಆರೋಪಿ ಪರ ವಕೀಲರಾದ ಶ್ರೀ ಟಿ.ಎಂ.ಆರ್ ರವರಿಂದಃ-</u>

*4.* ಪರಶಿವಮೂರ್ತಿಯಮರನ್ನು ವಿಶ್ವನಾಥ.ಕೆ, ಪರಶಿವ.ಪಿ ಮತ್ತು ಇತರರು ಕೊಲೆ ಮಾಡಿದ್ದಾರೆ ಎಂದು ಎಲ್ಲಿ ಮತ್ತು ಯಾರಿಂದ ಗೊತ್ತಾಗಿದೆ ಎಂದರೆ ಒಬ್ಬರಿಂದ ಒಬ್ಬರು ಮಾತನಾಡುವಾಗ ಗೊತ್ತಾಗಿದೆ ಆದರೆ ಯಾರು ಮತ್ತು ಎಲ್ಲಿ ಹೇಳಿದ್ದರು ಎಂದು ನಿಖರವಾಗಿ ಹೇಳಲು ಆಗುವುದಿಲ್ಲ.

***1* ರಿಂದ *4* ನೇ ಆರೋಪಿತರ ಪರ ವಕೀಲರು ಈ ಮೇಲಿನಂತೆ ಪಾಟೀ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ.**

<u>ಮರು ವಿಚಾರಣೆಃ- ಇಲ್ಲ.</u>

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

*ಓ ಹೇ ಕೇ ಸ ಇ ಎ ಒ.,*

*4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,*
ಮೈಸೂರು